**<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ಕೃಷ್ಣರಾಜನಗರ</u>**

**<u>ಸಿ. ಸಿ 151/2026</u>**

**ಫಿರ್ಯಾದಿ** ಃ ಸರ್ಕಾರದ ಪರ ಕೆ.ಆರ್.ನಗರ ಪೋಲೀಸ್ ಠಾಣೆ

ಃ ವಿರುದ್ದ ಃ

**ಆರೋಪಿತರು** ಃ ನವೀನ್ ಕೆ ಬಿನ್ ಲೇಟ್ ಕೃಷ್ಣೆಗೌಡ ,
ವಾಸ ಃ ಕಗ್ಗೆರೆ ಗ್ರಾಮ
ಕೆ. ಆರ್.ನಗರ ತಾಲ್ಲೂಕು,
ಮೈಸೂರು ಜಿಲ್ಲೆ.

**<u>ದೋಷಾರೋಪಣೆ</u>**

ದಿನಾಂಕಃ01-03-2026 ರಂದು ರಾತ್ರಿ 19.45 ಗಂಟೆ ಸಮಯದಲ್ಲಿ ಕೆ.ಆರ್ ನಗರ ಪೊಲೀಸ್ ಠಾಣಾ ವ್ಯಾಪ್ತಿಯ ಕೆ ಆರ್ ನಗರ ಟೌನ್ ಹಾಸನ-ಮೈಸೂರು ರಸ್ತೆಯ ಗರುಡಗಂಭ ವೃತ್ತದ ಹತ್ತಿರ ವಾಹನವನ್ನು ತಪಾಸಣೆ ಮಾಡುತ್ತಿದ್ದಾಗ ವಾಹನ ಸಂಖ್ಯೆ ಕೆಎ-22-ಎಮ್‌ಡಿ-4444 ಚಾಲಕನಾದ ನೀವು ಮದ್ಯಪಾನ ಮಾಡಿ ವಾಹನವನ್ನು ಅಡ್ಡಾದಿಡ್ಡಿಯಾಗಿ ಚಾಲನೆ ಮಾಡಿಕೊಂಡು ಬರುತ್ತಿದ್ದು ನಿಲ್ಲಿಸಿ ಆಲ್ಕೊಮೀಟರ್ ಸಹಾಯದಿಂದ ಪರಿಶೀಲಿಸಿದಾಗ 52 ಎಂ.ಜಿ/100 ಎಂ ಎಲ್ ನಷ್ಟು ಮದ್ಯಪಾನ ಮಾಡಿರುವುದು ಕಂಡುಬಂದಿರುತ್ತದೆ. ಆ ಮೂಲಕ ಆರೋಪಿಯಾದ ನೀವು **ಮೋಟಾರು ವಾಹನ ಕಲಂ 185(2)** ರ ಅಡಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞಾವನೆಯಲ್ಲಿ ಮಾಡಿರುತ್ತೀರೆಂದು ಆಪಾದಿಸುತ್ತೇನೆ.

ಆದ್ದರಿಂದ ನೀವು ಈ ನ್ಯಾಯಾಲಯದಲ್ಲಿ ವಿಚಾರಣೆಯನ್ನು ಎದುರಿಸಬೇಕೆಂದು ನಿರ್ದೇಶಿಸುತ್ತೇನೆ.

**ಪ್ರ: 1)** ಕನ್ನಡದಲ್ಲಿ ಓದಿ ಹೇಳಿದ ಮೇಲಿನ ಆರೋಪಣೆ ಅರ್ಥವಾಯಿತೇ?

ಉ: ಅರ್ಥವಾಯಿತು

**ಪ್ರ: 2)** ಅಪರಾಧವನ್ನು ಒಪ್ಪಿಕೊಳ್ಳುವಿರೋ ಅಥವಾ ಸಾಕ್ಷಿಗಳ ವಿಚಾರಣೆಯಾಗ ಬಯಸುವಿರಾ?

ಉ: ಒಪ್ಪಿಕೊಳ್ಳುತ್ತೇನೆ

ಆರೋಪಿಯ ವಿರುದ್ಧ ದೋಷಾರೋಪಣೆ ರಚಿಸಿ ನೇರವಾಗಿ ಓದಿ ತಿಳಿಸಿದ ನಂತರ ಆತನು ಕೊಟ್ಟ ಉತ್ತರವನ್ನೇ ಸರಿಯಾಗಿ ಪಡೆದುಕೊಳ್ಳಲಾಯಿತೆಂದು ದೃಢೀಕರಿಸಿದೆ.

ದಿ: 06-03-2026

**(ಚಂದನ್ ಎಸ್ )**
ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ.ಗಳು,
ಕೆ. ಆರ್. ನಗರ.

**ಆರೋಪಿಯ ಸಹಿ:**